ಮೈಸೂರ ಗೆಜಿಟ್.

ನಂ. 38 ಸರ್ಕಾರದಿಂದ ಪಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಶಪ್ಟಂಬರ್ ತಾ॥ 23, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 249—252

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕೌಂಟೆಂಟ್ ಜನರಲ್ಲವರು, ಮಾಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನ್ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು. .. 455—462

3ನೇ ಭಾಗ—ಇಂಡ್ಯ ಗವರ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಪರೆ ಪಟ್ಟಿ. .. .. 113—129

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 2ನೇ ಶಪ್ಟಂಬರ್ 1876.

ನಂ. 206. ಬೆಂಗಳೂರು ಲಷ್ಕರ್ ಮ್ಯುನಿಸಿಪಾಲಿಟಿ ಬಗ್ಯಾಗಿ ಏರ್ಪಟ್ಟ ಈ ಕೆಳಗೆ ಬರುವ ಬೈಲಾ ನಿಬಂಧನೆಯು ಚೀಫ್ ಕಮ್ಮಿಷನರವರಿಂದ ಮಂಜೂರು ಮಾಡಲ್ಪಟ್ಟ ಸರ್ವರಿಗೂ ತಿಳಿಯುವ ಬಗ್ಯೆ ಪಾಯಿಷ್ ಮಾಡಲ್ಪಟ್ಟಿರುತ್ತೆ.

ನಂ. 4—51—ಲಷ್ಕರಿನ ಯಾವ ಪಬ್ಲಿಕ್ ರಸ್ತೆಗಳಲ್ಲಾಗಲಿ, ಸಂದಿಗಳಲ್ಲಿಯಾಗಲಿ, ಉತ್ಸವಕಾಲಗಳಲ್ಲಿ ಯಾದರೂ ಹಬ್ಬದ ದಿನಗಳಲ್ಲಿ ಯಾದರೂ ಐದು ಅಡಿಗಳ ಚದರಕ್ಕಿಂತಲೂ ಹೆಚ್ಚಾದ ವಿಸ್ತೀರ್ಣವುಳ್ಳ ಯಾವುದು ಹಂಗಾಮೀ ಚಪ್ಪರವನ್ನು ಕಟ್ಟಿಸುವ

ಯಾವ ಮನುಷ್ಯನಾಗಲಿ ಲೈಸೆನ್ಸಿನ ರುಸುಂ ಪೊಂದು ರೂಪಾಯಿಯನ್ನು ಕೊಡತಕ್ಕದ್ದು. ಮತ್ತು ಜಾಸ್ತೀ ಪ್ರತಿ ಐದು ಅಡಿಗಳಿಗೂ ಜಾಸ್ತೀ ರುಸು ಬಂದು ರೂಪಾಯಿಯನ್ನು ಕೊಡತಕ್ಕದ್ದು. ಐದು ಅಡಿಗಳ ಜದರಕ್ಕಿಂತಲೂ ಕಮ್ಮೀ ವಿಸ್ತೀರ್ಣವುಳ್ಳ ದರೋಬಸ್ತು ಚಪ್ಪರಗಳೂ ಈ ಬೈಲಾ ನಿಬಂಧನೆಯ ಅಮಲ್ ದೆಸೇಯಿಂದ ವಿನಾಯಿಸಲ್ಪಟ್ಟಿರುತ್ತವೆ.

ನಂ. 219. ತಾರೀಖು 18ನೇ ಶಪ್ಟಂಬರ್ 1876.

ಬೆಂಗಳೂರು ಪಹರ್ ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಜಾರೀಯಾಗತಕ್ಕ ಬಗ್ಗೆ, ಈ ಕೆಳಗ ಬರುವ ಬೈಲಾ ನಿಬಂಧನೆಗಳು ಮಂಜೂರ್ ಮಾಡಲ್ಪಟ್ಟವೆ;-

ಬೈಲಾ 27.—ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಿರುವ ಯಾವ ದಫ್ನ ಭೂಮಿಯಲ್ಲಾಗಲಿ, ಕಲ್ಲು ಕೆಲಸದ ಸಮಾಧಿಯಾಗಿದ್ದರೆ ಅಂತಾದ್ದರಲ್ಲಿ ಕಾರ್ಫ್ಸಿಯಾನೆ ಜಟ್ಟಿದ ಯಾ ಮುರ್ದೆಯ ಮೇಲ್ಗಡೆಯಿಂದ $4\frac{1}{2}$ ಅಡಿಗಳ ಆಳಕ್ಕಿಂತ ಕಡಮೆಯಾದ ಆಳದಲ್ಲಿ ಯಾವ ಮನುಷ್ಯನೂ ಯಾವ ಮುರ್ದೆಯನ್ನಾಗಲಿ ದಫ್ನ ಮಾಡಕೂಡದು, ಯಾ ದಫ್ನ ಮಾಡಿಸ ಕೂಡದು, ಮತ್ತು ಹಾಗೆ ಕಲ್ಲು ಕೆಲಸವಲ್ಲದ ಸಮಾಧಿಯಲ್ಲಿ 6 ಅಡಿಗೆ ಕಡಮೆಯಾದ ಆಳದಲ್ಲಿ ದಫ್ನ ಮಾಡಲೂ ಕೂಡದು ಮಾಡಿಸಲೂ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು 20 ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{27}$ ಅಂತಾ ಯಾವ ದಫ್ನ ಭೂಮಿಯೊಳಗಾಗಲಿ, ಹಾಲೀ ಯಿರುವ ಯಾವ ಸಮಾಧಿಗಾಗಲಿ; ಯೆರಡು ಅಡಿ ದೂರಕ್ಕಿಂತ ಕಡಮೆಯಾದ ದೂರದಲ್ಲಿ ಯಾವ ಮನುಷ್ಯನೂ ಬಂದು ಸಮಾಧಿಯನ್ನು ಕಟ್ಟು ಕೂಡದು, ಯಾ ಅಗೆಯ ಕೂಡದು, ಅಥವಾ ಕಟ್ಟಿನ ಕೂಡದು ಯಾ ಅಗೆಯಿಸ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 28.—ಮುರ್ದೆಯುಳ್ಳ ಯಾವ ಸಮಾಧಿಯಾಗಲಿ, ಹಳ್ಳವಾಗಲಿ, ಪೈಸಿಡೆಂಟರ ಬರವಣಿಗೆ ಮೂಲಕವಾದ ಅಪ್ಪಣೇ ಹೊರತಾಗಿ ಮುಲ್ಲಾ ಮಾಡಲ್ಪಡ ಕೂಡದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ; ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{28}$ ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜರ್ಜ ಭೂಮಿಯೊಳಗಾಗಲಿ; ಯಾವ ಮುರ್ದೆಯನ್ನಾದರೂ ಮುರ್ದೆಯ ಬಂದು ಭಾಗವನ್ನಾದರೂ ಯಾವ ಮನುಷ್ಯನೂ ಜರ್ಜ ಮಾಡುವಲ್ಲಿ ಯಾ ಮಾಡಿಸುವಲ್ಲಿ ಆದಾಗಲಿ, ಅದರ ಪೈಕಿ ಒಂದು ಭಾಗವಾಗಲಿ, ಸಂಪೂರ್ಣವಾಗಿ ಬೂದೀಯಾಗದೆ ಉಳಿಸಬಾರದು. ಅಥವಾ ಹಾಗೆ ಬೂದೀಯಾಗುವ ಪರ್ಯಂತ ಆಚಿಗೆ ಸಾಗಿಸಲ್ಪಡ ಗೊಡಿಸಬಾರದು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವಂತಾ ಯಾವ ಮನುಷ್ಯನಾಗಲಿ, ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ಬೈಲಾ 29.—ಮ್ಯುನಿಸಿಪೆಲ್ ಸರಹದ್ದಿನಲ್ಲಿರುವ ಯಾವ ಜರ್ಜ ಭೂಮಿಯಾಗಾಗಲಿ, ಯಾವ ಮುರ್ದೆಯನ್ನು ಯಾ ಮುರ್ದೆಯ ಬಂದು ಭಾಗವನ್ನು ಯಾವನು ತರುತ್ತಾನೋ ಯಾ ಸಾಗಿಸಿಕ್ಕೊಂಡು ಬರುತ್ತಾನೋ ಅಥವಾ ತರುವಂತೆ ಯಾ ಸಾಗಿಸಿಕ್ಕೊಂಡು ಬರುವಂತೆ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನೂ, ಸದರೀ ಮುರ್ದೆಯು ಸದರೀ ಜರ್ಜ ಭೂಮಿಗೆ ಬಂದ ಅರುಘೆಂಟೆ ಯೊಳಗಾಗಿ ಮುರ್ದೆಯನ್ನು ಯಾ ಮುರ್ದೆಯ ಭಾಗವನ್ನು ಜರ್ಜ ಮಾಡಕ್ಕೇಕು ಯಾ ಮಾಡಿಸಬೇಕು.

ಈ ಬೈಲಾ ನಿಬಂಧನೆಯನ್ನು ಉಲ್ಲಂಘಿಸುವ ಯಾವ ಮನುಷ್ಯನಾಗಲಿ, ಬಬ್ಬ ಮಾಜಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು ಯಿಪ್ಪತ್ತು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

$\frac{2}{29}$ ಪ್ರತಿ ದಫ್ನ ಯಾ ಜರ್ಜ ಭೂಮಿಯು ಪೈಸಿಡೆಂಟರಿಗೆ ತೃಪ್ತಿಕರವಾಗಿ ಸಾಕಾದಷ್ಟು ಗೋಡೆಯಿಂದ ಯಾ ಕಟಕಟೆಯಿಂದ ಆವರಣ ಏರ್ಪಡಿಸಲ್ಪಡತಕ್ಕದ್ದು.

ಈ ಬೈಲಾ ನಿಬಂಧನೆಯ ಪ್ರಕಾರ ನಡೆಯಲಿಕ್ಕೆ ತಪ್ಪುವ, ಜರ್ಲ ಯಾ ದರ್ಖ ಭೂಮಿಗಳ ಟ್ರಸ್ಟ್ಗಳಾಗಲಿ ಅಥವಾ ಅವು ಗಳ ಚಾರ್ಜ್ದವುಳ್ಳ ಇತರ ಮನುಷ್ಯರಾಗಲಿ ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಸ್ಥಾಪಿಸಲ್ಪಟ್ಟು, ಯಿಪ್ಪತ್ತು ರೂಪಾಯಿಗಳಿಗೆ ಮಿಾರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಯಿದರಲ್ಲಿ ಕಂಡ ಸದರೀ ಜನಗಳು ಹಾಗೆ ತಪ್ಪು ಸ್ಥಾಪಿಸಲ್ಪಟ್ಟ ಬಳಿಕ ಪೈಸಿ ಜೆಂಟರಿಗೆ ತೃಪ್ತಿಕರವಾಗಿ ಜರ್ಲ ಭೂಮಿಗಳಿಗಾಗಲಿ ದರ್ಖ ಭೂಮಿಗಳಿಗಾಗಲಿ, ಗೋಡೆಯನ್ನು ಯಾ ಕಟಕಟೆಯನ್ನು ಕಟ್ಟಿಸಲಿ ಕ್ಕೆ ಉಪೇಕ್ಷಿಸುವ ಪ್ರತಿದಿನಕ್ಕೂ ಯಿರಡು ರೂಪಾಯಿಗಳಿಗೆ ಮಿಾರದ ಒಂದು ಜಾಸ್ತೀ ಜುರ್ಮಾನೆಗೆ ಸಹ ಗುರಿಯಾಗತಕ್ಕದ್ದು.

ನಂ. 220. ತಾರೀಖು 15ನೇ ಸಪ್ಟಂಬರ್ 1876.

ಮೈಸೂರು ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ಮೇಜರ್ ಗ್ರಾಂಟ್ ಸಾಹೆಬರವರಿಗೆ, ಅವರು ಯಾವ ತಾರೀಖು ಲಗಾಯತು ಉಪಯೋಗಿಸಿ ಕೊಳ್ಳುತ್ತಾರೋ ಆ ಲಗಾಯತು ಸಿವಿಲ್ ಲೀವ್ ಕೋಡಿನ 21ನೇ ಸೆಕ್ಷನ್ ಅನುಸರಿಸಿ ಮೂರುತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ರೆವಿನ್ಯೂ ಸರ್ವೆ ಡಿಪ್ಯೂಟಿ ಸೂಪರಿಂಟೆಂಡೆಂಟ್ ಮೇಜರ್ ಆಂಡರ್ಸನ್ ಸಾಹೆಬರವರು, ಮೇಜರ್ ಗ್ರಾಂಟ್ ಸಾಹೆ ಬರವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಮೈಸೂರು ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟು ರಾಗಿ ಆಕ್ಟಿಂಗ್ ತರೀಕ್ಗೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೇಪ್ಟನ್ ಮೆಕೆಂಜಿ ಸಾಹೆಬರವರು, ಮೇಜರ್ ಆಂಡರ್ಸನ್ ಸಾಹೆಬರವರಿಗೆ ಬದಲಾಗಿ ಮೈಸೂರು ರೆವಿನ್ಯೂ ಸರ್ವೇ ಡಿಪ್ಯೂಟಿ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 221. ತಾರೀಖು 15ನೇ ಸಪ್ಟಂಬರ್ 1876.

ಕಡಬ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಅಲ್ಲೀನಕ್ಕ ಖಾರರವರು, ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ ಕ್ಲೋಸ್ಪೇ ಟೆ ತಾಲ್ಲೂಕು 3ನೇ ಕ್ಲಾಸ್ ಮೇಜಸ್ಟ್ರೇಟರಾಗಿಯೂ ಮತ್ತು 5ನೇ ಗ್ರೇಡ್ ಅಮಲ್ದಾರರಾಗಿಯೂ, ಹಂಗಾಮಿ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 222. ತಾರೀಖು 15ನೇ ಸಪ್ಟಂಬರ್ 1876.

ಸ್ ಸ್ 1876ನೇ ಇಸವಿ ಆಗಸ್ಟು ತಾರೀಖು 15ರ ಲಗಾಯತು, ಬೆಂಗಳೂರು ಡಿಸ್ಟ್ರಿಕ್ಟ್ ನಂ. 3ನೇ ಸರಕಿಲ್ ಮುನಸಿಫರು ಮೆ|| ಲಾರೆನ್ಸ್ ಸಾಹೆಬರಿಗೆ ಯಿರಡು ತಿಂಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ನಂ. 223. ತಾರೀಖು 16ನೇ ಸಪ್ಟಂಬರ್ 1876.

ಈ ಕೆಳಗೆ ನಮೂದಿಸಲ್ಪಡುವ ಆಫಿಸರ್ಗಳು ವಿಶೇಷ ಕೆಲಸಕ್ಕೋಸ್ಕರ ಬೇಕಾಗಿರುವದರಿಂದ ಇದರಡಿ ಬರುವ ಜಾಗಾ ಮೊ ಕರೂರಾತಿಗಳು ಮಾಡಲ್ಪಟ್ಟಿರುತವೆ.

ಅ|| ಕಮ್ಮಿಷನರ್ ಮೆ|| ಮಹಮ್ಮದ್ ಅಲ್ಲಿಯವರು ಕೋಲಾರ ಡಿಸ್ಟ್ರಿಕ್ಟಿಗೆ.

ಅಟೂಚೀ ಮೆ|| ಸಿ. ಮಾದಯ್ಯನವರು ತುಮಕೂರು ಡಿಸ್ಟ್ರಿಕ್ಟಿಗೆ.

1876ನೇ ಜೂಲೈ 31ನೇ ಮುಕ್ಕುಂ 160ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಮೆ|| ಮಹಮ್ಮದ್ ಅಲ್ಲಿಯವರಿಗೆ ಕೊಡಲ್ಪ ಟ್ಟ ಪ್ರಿವಿಲೀಜ್ರಜಾ ಈ ತಾರೀಖು ಲಗಾಯತ್ ರದ್ದುಮಾಡಲ್ಪಟ್ಟಿರುತ್ತೆ.

ನಂ. 224. ತಾರೀಖು 19ನೇ ಸಪ್ಟಂಬರ್ 1876.

ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಮಹಮದಲ್ಲೀಯವರಿಗೆ (1872ನೇ ಇಸವೀ 10ನೇ) ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 19 ವ 28ನೇ ಸೆಕ್ಷನ್ಗಳ ನಿಬಂಧನೆಗಳನುಸರಿಸಿ 1ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರಗಳೂ ಒಂದು ಡಿಸ್ಟ್ರಿಕ್ಟಿನ ಡಿವಿಜ್ ಮಾ ಜಿಸ್ಟ್ರೇಟರ ಅಧಿಕಾರಗಳೂ ಮತ್ತು ಸದರೀ ಆಕ್ಟಿನ 29ನೇ ಸೆಕ್ಷನ್ನಲ್ಲಿ ಕಾಣಿಸೋಣಾದ ಅಧಿಕಾರಗಳೂ ಕೊಡಲ್ಪಟ್ಟಿರುತ್ತಾರೆ.

ನಂ. 225. ತಾರೀಖು 19ನೇ ಶಪ್ಟಂಬರ್ 1876.

ಚಿತ್ರದುರ್ಗ ತಾಲ್ಲೂಕು ಶಿರಸ್ತೆದಾರ್ರು ಸೀನಪ್ಪನವರು, ಶಾಮಯ್ಯಂಗಾರ್ರ ಗೈರ್ ಹಾಜರೀ ಅಥವಾ ಮೆತ್ತೊಂದು ಹುಕ್ಕ್ತುಂ ಕೊಡುವ ಪರ್ಯಂತ ೨ನೇ ಗ್ರೇಡ್ ಅಮಲ್ದಾರ್ ವ ಪಾವಗಡದ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 226. ತಾರೀಖು 20ನೇ ಶಪ್ಟಂರ್ಬು 1876.

ಈ ಕೆಳಗೆ ನಮೂದಿಸಲ್ಪಡುವ ಜನಗಳು ಪೋಟೂಪೋಟೀಯಿಂದ ಪರೀಕ್ಷೆಮಾಡಲ್ಪಟ್ಟು ಮೈಸೂರು ಸೀಮೆಯ ಮೆಡಿಕೆಲ್ ಸಾರ್ವಿಸಿಗೆ ಲಾಯಖಿರುವಂತೆ ಕಾಣಬಂದದರಿಂದ, 1876ನೇ ಅಕ್ಟೋಬರು 1ನೇ ತಾರೀಖು ಲಗಾಯತು ಮೆಡಿಕೆಲ್ ಪ್ಯುಪಿಲ್ಗಳಾಗಿ ಅಂಗೀಕರಿಸಲ್ಪಟ್ಟು ನೇಮಿಸಲ್ಪಟ್ಟಿರುವದು ಹ್ಯಾಗಂದರೆ,—

ಹೆಸರು.	ವಿದ್ಯಾಭ್ಯಾಸ ಮಾಡಿದ ಸ್ಥಳ.	ಹೆಸರು.	ವಿದ್ಯಾಭ್ಯಾಸ ಮಾಡಿದ ಸ್ಥಳ.
ಎ. ವರದರಾಜುಲುನಾಯುಡು	ಮದರಾಸ್ ವ ಬೆಂಗಳೂರು,	ಮೇಲ್ ಬಿಜೆಡೆಕ್—ಇಫ್ರಯಿಂ	ಲಂರ್ಡ ಡಿಟೋ.
ಚಿ. ಬಿ ಚಿನ್ನಸಾಮಿ	ವೆಸಿಲಿಯರ್ಡ ಮಿಷ್ಸನ್ಸ್ಕೂಲ್.	ಅಬ್ದುಲ್ವಾಹಬ್	30ನೇ ರಿಜಿಮೆಂಟ್ ನೇ|| ಇ|| ಸ್ಕೂಲ್.
ವೈ. ಎಸ್, ಬಾಲಸುಂದರಂಮೊದಲಿ	ಡಿಟೋ.	ಜೋಯಿಲ್ ಸಾಮ್ಯೂಯಲ್	ಲರ್ಡಮಿಷ್ಸನ್ಸ್ಕೂಲ್.
ಎಂ. ಆರ್. ಶ್ರೀನಿವಾಸುಲುನಾಯುಡು	ಡಿಟೋ.	ಏ. ರಾಜಗೋಪಾಲನಾಯಕರ್	ಸೆಂಟ್ರಲ್ ಕಾಲೇಜ್.

"ಬವೋಜೀಬ್ ಹುಕ್ಕ್ತುಂ,"

T. CLARKE,
Offg. Secretary.

ಕೊಡಗು ಜೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 15ನೇ ಶಪ್ಟಂಬರ್ 1876.

ಈ ಕೆಳಗೆ ಬರುವ ಮ್ಯುನಿಸಿಪಲ್ ಬೈಲಾ ನಿಬಂಧನೆಯು ವೀರರಾಜೇಂದ್ರ ಪೇಟೆಯಲ್ಲಿ ಜಾಲ್ತೀ ಇಸವಿಯಲ್ಲಿ ಮಾತ್ರ ಜಾರೀಯಲ್ಲಿರುವ ಹಾಗೆ ಇದನ್ನು ಜೀಪ್ ಕಮ್ಮಿಷನ್ನರ್ ಸಾಹೆಬರವರು ಮುಂಜೂರು ಮಾಡಿರುತ್ತಾರೆ.

ಮ್ಯುನಿಸಿಪಲ್ ಸರಹದ್ದಿನ ವಳಕ್ಕೆ ವಿಕ್ರಯಕ್ಕಾಗಿ ತರಲ್ಪಡುವ ಪ್ರತಿ ಯೆತ್ತಿಗೂ, ಆಕಳಿಗೂ, ಯಾ ಎಮ್ಮೆಕೋಣಕ್ಕೂ ಒಂದು ಆಣೆ ತೆರಿಗೆ ವಸೂಲ್ ಮಾಡಲ್ಪಡತಕ್ಕದು.

"ಬವೋಜೀಬ್ ಹುಕ್ಕ್ತುಂ."

T. CLARKE,
Offg. Secretary.